# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವಜನಿಕ ವಿತರಣಾ ಪದ್ಧತಿಯಡಿ ರಚಿಸಲಾಗಿರುವ ಜಾಗೃತ ಸಮಿತಿಯ ಸದಸ್ಯರುಗಳು ಹಾಜರಾಗುವ ತರಬೇತಿಗೆ ಪ್ರಯಾಣ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ ಆನಾಸ 144 ಡಿಆರ್‌ಎ 2013, ದಿನಾಂಕ: 30.05.2016 ಮತ್ತು 08.11.2016.

2) ಸರ್ಕಾರದ ಆದೇಶ ಸಂಖ್ಯೆ ಆನಾಸ 52 ಡಿಆರ್‌ಎ 2012, ದಿನಾಂಕ: 18.06.2016

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ದಿನಾಂಕ: 30.05.2016 ಹಾಗೂ ದಿನಾಂಕ: 08.11.2016ರ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ಸೆಕ್ಷನ್ 29(1) ಹಾಗೂ ಸೆಕ್ಷನ್ 40ರ ಸಬ್ ಸೆಕ್ಷನ್ 2(i) ಅನ್ವಯ ರಾಜ್ಯದಲ್ಲಿ ಜಾಗೃತ ಸಮಿತಿ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಮಗಳು 2016ನ್ನು ರಚಿಸಲಾಗಿದೆ. ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ನ್ಯಾಯಬೆಲೆ ಅಂಗಡಿ ಹಂತದ ಜಾಗೃತ ಸಮಿತಿಯ ಅಧಿಕಾರ ಹಾಗೂ ಕಾರ್ಯಸೂಚಿಗಳ ಕುರಿತಂತೆ ಆದೇಶಿಸಲಾಗಿರುತ್ತದೆ. ಈ ಆದೇಶದ ಕ್ರಮಸಂಖ್ಯೆ (vi)ರಲ್ಲಿ ಜಾಗೃತ ಸಮಿತಿ ಸದಸ್ಯರಿಗೆ ಪರಿಜ್ಞಾನ ಹೊಂದಿದ ವ್ಯಕ್ತಿಗಳು / ಉಪಗ್ರಹ ಆಧಾರಿತ ತರಬೇತಿ ಇತ್ಯಾದಿಗಳ ಮೂಲಕ ನಿಯಮಿತ ತರಬೇತಿ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ. ಅಂತಹ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವ ಸದಸ್ಯರಿಗೆ ಸರ್ಕಾರದಿಂದ ನಿಗಧಿಪಡಿಸಲ್ಪಡುವ ಸೂಕ್ತ ಟಿ.ಎ/ ಡಿ.ಎ ಪಡೆಯಲು ಅರ್ಹತೆ ಹೊಂದಿರುತ್ತಾರೆ ಎಂದು ತಿಳಿಸಲಾಗಿದೆ.

ಮೇಲಿನ ಆದೇಶದನ್ವಯ ರಾಜ್ಯದಲ್ಲಿನ ನ್ಯಾಯಬೆಲೆ ಅಂಗಡಿಗಳ ಹಂತದ ಜಾಗೃತ ಸಮಿತಿಯ ಸದಸ್ಯರುಗಳು ಹಾಜರಾಗುವ ತರಬೇತಿಗೆ ಪ್ರತಿ ಸದಸ್ಯರಿಗೆ ರೂ: 150/-ಗಳನ್ನು ಪ್ರಯಾಣ ಮತ್ತು ಇತರೆ ಭತ್ಯೆಗಳಿಗಾಗಿ ಪಾವತಿಸಲು ತೀರ್ಮಾನಿಸಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ಆಯುಕ್ತರ ಪಿ.ಡಿ ಖಾತೆ ಸಂಖ್ಯೆ:105051 ರಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಪ್ರಸ್ತಾಪಿಸಲಾಗಿದೆ. ಅದರಂತೆ, ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: 144 ಡಿಆರ್‌ಎ 2013 ಬೆಂಗಳೂರು, ದಿನಾಂಕ: 12.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ನ್ಯಾಯಬೆಲೆ ಅಂಗಡಿಗಳ ಹಂತದ ಜಾಗೃತ ಸಮಿತಿಯ ಸದಸ್ಯರುಗಳು ಹಾಜರಾಗುವ ತರಬೇತಿಗೆ ಪ್ರತಿ ಸದಸ್ಯರಿಗೆ ರೂ: 150/-ಗಳನ್ನು ಪ್ರಯಾಣ ಮತ್ತು ಇತರೆ ಭತ್ಯೆಗಳಿಗಾಗಿ ಪಾವತಿಸಲು ಆದೇಶಿಸಿದೆ. ಈ ವೆಚ್ಚವನ್ನು ಆಯುಕ್ತರ ಪಿ.ಡಿ ಖಾತೆ ಸಂಖ್ಯೆ:105051 ರಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವುದು ಹಾಗೂ ಇದು ಪ್ರಸಕ್ತ ವರ್ಷದಿಂದಲೇ ಜಾರಿಗೆ ಬರತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1152 ವೆಚ್ಚ-5 /2016 ದಿನಾಂಕ:27.12.2016 ರಲ್ಲಿ ನೀಡಿರುವ ಸಹಮತಿರನ್ವಯ ಹೊರಡಿಸಲಾಗಿದೆ.

ಆಯುಕ್ತರು, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ,
ಬೆಂಗಳೂರು - 560 052.
13 JAN 2017
ಟಪಾಲು ನೋ. ಸಂಖ್ಯೆ ...... ಶಾಖೆ......
CAO
2/3/1

Comp. no. 7992

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು
ಅವರ ಹೆಸರಿನಲ್ಲಿ

(ಅರ್ಚನ ಎಂ.ಎಸ್) 12/1/2017
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ
ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ.

**ಇವರಿಗೆ:**

ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರು ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಒದಗಿಸುವುದು.

2011